# ಶ್ರೇಷ್ಠ ಕೃಷಿಕ-2011

## ಜಿಲ್ಲೆ: ಹಾವೇರಿ



**ವಿಳಾಸ: ಶ್ರೀ ಚನ್ನಬಸಪ್ಪ ಶಿವಪ್ಪ ಕೊಂಬಳಿ**
**ಗ್ರಾ : ಕಾಕೋಳ, ತಾ : ರಾಣೇಬೆನ್ನೂರ**
**ಜಿ : ಹಾವೇರಿ**
**ಮೊ ನಂ : 9845890411**

## ಕೃಷಿಯಲ್ಲಿ ಮಾಡಿದ ಸಾಧನೆಗಳು

ಶ್ರೀ ಚನ್ನಬಸಪ್ಪ ಶಿವಪ್ಪ ಕೊಂಬಳಿ ಇವರು ಬರದ ತೆಕ್ಕೆಯಲ್ಲಿದ ಕಾಕೋಳ ಗ್ರಾಮದ 2500ಎಕರೆ ಪ್ರದೇಶದಲ್ಲಿ ಅಂತರ್ಜಲ ಹೆಚ್ಚಿಸುವ ಸಲುವಾಗಿ ಗ್ರಾಮದಲ್ಲಿದ್ದ ಬತ್ತಿದ 120 ತೆರೆದ ಬಾವಿಗಳಿಗೆ ತಿರುವು ಗಾಲುವೆ ಮುಖಾಂತರ ಮಳೆನೀರನ್ನು ಮರುಪೂರ್ಣಮಾಡಿ ಸರ್ಕಾರಿ ಜಾಗೆಗಳಲ್ಲಿ 12 ಕೆರೆಗಳನ್ನು ನಿರ್ಮಿಸಿ ಕೃಷಿ ಹೊಂಡ, ಇಂಗು ಗುಂಡಿ ನಿರ್ಮಿಸಿ ಗ್ರಾಮದ ಅಂತರ್ಜಲ ಹೆಚ್ಚಿಸಿ ಕೃಷಿ ಉತ್ಪಾದನೆ ಹೆಚ್ಚಳ ಮಾಡಿ ಪರಿಸರಕ್ಕಾಗಿ 600 ಎಕರೆ ಅರಣ್ಯವನ್ನು ಪುನರುಜ್ಜೀವನಗೊಳಿಸಿ, ಸ್ವತ : ಸಾವಯವ ಕೃಷಿಕನಾಗಿ ವಿಷಮುಕ್ತ ಆಹಾರ, ನೀರು, ಪರಿಸರ ಕಾಪಾಡುತ್ತಿದ್ದಾರೆ.

ಸಾವಯವದಲ್ಲಿಯೂ ಕೂಡಾ ಹೆಚ್ಚು ಉತ್ಪಾದಿಸಿದ ಹೆಮ್ಮೆ ಅವರಿಗೆ ಇದೆ. ಜೊತೆಗೆ ಸಮಗ್ರ ಕೃಷಿ ಮತ್ತು ನೈಸರ್ಗಿಕ ಕೀಟ ಹತೋಟಿ ಕ್ರಮ ಕೈಗೊಂಡಿದ್ದಾರೆ. ಏಕದಳ, ದ್ವಿದಳ ಹಾಗೂ ತೃಣಧಾನ್ಯಗಳನ್ನು ಬೆಳೆಯುತ್ತಿದ್ದಾರೆ. ಆಹಾರ ಭದ್ರತೆಗೆ ಒತ್ತುಕೊಡುವ ಉದ್ದೇಶದಿಂದ ರಾಜ್ಯದ ಇತರೆ ರೈತರಿಗೆ ಬರ ನಿರೋಧಕ ಬೆಳೆಗಳಾದ ನವಣೆ, ಸಾವೆ, ರಾಗಿ, ಹಾರಕ, ಊದಲು, ಬರಗು ಕೊರಲೆಯಂತಹ ಸಿರಿಧಾನ್ಯಗಳನ್ನು ಬೆಳೆದು ಬೀಜ ಸಂಗ್ರಹಿಸಿ ವಿತರಿಸುವ ಹಾಗೂ 26 ದೇಶಿ ತಳಿಯ ಬದನೆಯನ್ನು ಬೆಳೆದು ಬೀಜ ಸಂಗ್ರಹಿಸಿ, ರೈತರಿಗೆ ದ್ವಿಗುಣ ಮಾಡಲು ಕೊಟ್ಟಿದ್ದಾರೆ.

ಎರೆಹುಳು ಗೊಬ್ಬರ ಜೀವಾಮೃತ, ಸಗಣಿ ಗೊಬ್ಬರ, ಕುರಿ ಗೊಬ್ಬರ ಬೆಳೆ ಉಳಿಕೆಗಳನ್ನು ಸೇರಿಸಿ ಸಾವಯವ ಗೊಬ್ಬರ ಮಾಡುತ್ತಿದ್ದಾರೆ. ಹನಿ ನೀರಾವರಿ ಅಳವಡಿಸಿ ನೀರು ಉಳಿತಾಯವನ್ನು ಕೂಡಾ ಮಾಡಿದ್ದಾರೆ. ಸಾವಯವ ಕೃಷಿ, ನೈಸರ್ಗಿಕ ಕೃಷಿ, ಸಹಜ ಕೃಷಿ, ದೇಶಿ ಬೀಜ, ಗೋವಿನ ಮಹತ್ವ, ಮಳೆ ನೀರು ಸಂರಕ್ಷಣೆ ಮಾಡುವುದರ ಜೊತೆಗೆ ನೀರು ಶುದ್ಧೀಕರಣ ಹಾಗೂ ನೀರಿನ ಮಿತ ಬಳಕೆ, ತೃಣ ಧಾನ್ಯದ ಪೌಷ್ಠಿಕತೆ, ಮೌಲ್ಯವರ್ಧನೆ ಸಂಸ್ಕರಣೆ ಕುರಿತು ರೈತರಿಗೂ ಮತ್ತು ರೈತ ಮಹಿಳೆಯರಿಗೂ ಅರಿವು ಮೂಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೇ ಗ್ರಾಮದಲ್ಲಿ ನೈಸರ್ಗಿಕ ಸಂಪನ್ಮೂಲ ಅಭಿವೃದ್ಧಿ ಸಂಘ ಸ್ಥಾಪಿಸಿ ಅದರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇವರಿಗೆ ಕೃಷಿ ಮಾಧ್ಯಮ ಕೇಂದ್ರ ಧಾರವಾಡ ಹಾಗೂ ಜಲಕೂಟ ಕೇರಳದ 2004 ರ ರಾಜ್ಯ ಮಟ್ಟದ ವಿಶೇಷ ಪ್ರಶಸ್ತಿ ಲಭಿಸಿದೆ. ಕನ್ನಡಪ್ರಭ ವರ್ಷದ ವ್ಯಕ್ತಿ ಪುರಸ್ಕಾರ – 2005, ಕರ್ನಾಟಕ ಸರ್ಕಾರದ ಕೃಷಿ ಪಂಡಿತ ಪ್ರಶಸ್ತಿ – 2006, ಸೃಷ್ಟಿ ಸಮ್ಮಾನ ರಾಷ್ಟ್ರ ಮಟ್ಟದ ಪುರಸ್ಕಾರ – 2008 ಮತ್ತು ರೈತ ವಿಜ್ಞಾನಿ ರಾಷ್ಟ್ರ ಪ್ರಶಸ್ತಿ –2010 ಮತ್ತು ಪರಮ ಪೂಜ್ಯ ಶ್ರೀ ರವಿಶಂಕರ ಗುರುಜೀಯವರಿಂದ ಕೃಷಿಂ ಋಷಿ 2011 ಪ್ರಶಸ್ತಿಗೆ ಭಾಜನರಾಗಿದ್ದಾರೆ.

******